**Com.O.S.** 155/2023
**PW**-1

**ಸಾಕ್ಷಿಯನ್ನು ದಿನಾಂಕ 15.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಹೆಚ್.ಸಿ ವಕೀಲರಿಂದಃ**

ವಾದಿ ಸಂಸ್ಥೆ ಆಹಾರ ವಸ್ತುಗಳನ್ನು ಪ್ಯಾಕ್ ಮಾಡುವ ಪ್ಲಾಸ್ಟಿಕ್ ಬ್ಯಾಗುಗಳನ್ನು ತಯಾರಿಸಿ ಮಾರಾಟ ಮಾಡುತ್ತದೆ. ವಾದಿ ಸಂಸ್ಥೆಗೆ ಇಬ್ಬರು ನಿರ್ದೇಶಕರಿದ್ದಾರೆ. ನಾನು ವಾದಿ ಸಂಸ್ಥೆಯ ಎಕ್ಸಿಕ್ಯೂಟಿವ್ ಅಡ್ಮಿನ್ ಆಗಿ ಕೆಲಸ ಮಾಡುತ್ತಿದ್ದೇನೆ. ಎಕ್ಸಿಕ್ಯೂಟಿವ್ ಅಡ್ಮಿನ್ ಆಗಿ ಕೆಲಸ ಮಾಡುತ್ತಿರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಅದು ನಮ್ಮ ವಕೀಲರಿಗೆ ಗೊತ್ತಿದೆ. ದಾವೆ ಹಾಕುವ ಕಾಲಕ್ಕೆ ಅಶ್ವಿನ್‌ಕುಮಾರ್ ಜಿ ಹೇಮದೇವ್ ಎಂಬುವವರು ವಾದಪತ್ರ ಸಲ್ಲಿಸಿದ್ದರು ಎಂದರೆ ನಿಜ. ಅವರಿಗೆ ವಾದ ಪತ್ರ ಸಲ್ಲಿಸಲು ಅಧಿಕಾರ ಇತ್ತಾ ಎಂದರೆ ನನಗೆ ಗೊತ್ತಿಲ್ಲ. ಅವರೇ ಮ್ಯಾನೇಜಿಂಗ್ ಡೈರೆಕ್ಟರ್ ಇರುವ ಕಾರಣ ದಾವೆ ಸಲ್ಲಿಸಲು ಅವರಿಗೆ ಅಧಿಕಾರ ಪತ್ರ ಬೇಕಿಲ್ಲ. ಇನ್ನೊಬ್ಬ ನಿರ್ದೇಶಕರು ಅಧಿಕಾರ ಪತ್ರ ನೀಡಬೇಕು ಎಂದರೆ ಬೋರ್ಡ ಮೀಟಿಂಗಿನಲ್ಲಿ ಅಧಿಕಾರ ನೀಡಲಾಗಿರುತ್ತದೆ. ಈ ದಾವೆ ಸಲ್ಲಿಸುವ ಕಾಲಕ್ಕೆ ಆ ರೀತಿ ಬೋರ್ಡ ಮೀಟಿಂಗ್ ಆಗಿದೆ. ಬೋರ್ಡ ಮೀಟಿಂಗ್ ರೆಶಲ್ಯೂಶನ್ ಪ್ರತಿ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ಅಧಿಕಾರ ಪತ್ರ ಹಾಜರುಪಡಿಸಿಲ್ಲ ಎಂದರೆ ನನಗೆ

ಗೊತ್ತಿಲ್ಲ. ಅಶ್ವಿನ್‌ಕುಮಾರ್ ಇವರಿಗೆ ಅಧಿಕಾರ ನೀಡಲು ರೆಶಲ್ಯೂಶನ್ ಮಾಡಲಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಅಶ್ವಿನ್‌ಕುಮಾರ್ ಇವರು ಅಧಿಕಾರ ನೀಡಿರುತ್ತಾರೆ. ಆ ಬಗ್ಗೆ ಜಿ.ಪಿ.ಎ ಮತ್ತು ಅಧಿಕಾರ ಪತ್ರ ಹಾಜರುಪಡಿಸಿದೆ. ಪ್ರತಿವಾದಿ ಸಂಸ್ಥೆಯವರು ನಮ್ಮ ಕಂಪನಿಯಿಂದ ಖರೀದಿ ಮಾಡಿದ್ದರಿಂದ ಅವರ ಪರಿಚಯ ಇದೆ. ಪ್ರತಿವಾದಿ ಸಂಸ್ಥೆಯವರು ಆಹಾರ ವಸ್ತುಗಳ ಪ್ಯಾಕಿಂಗ್ ವಸ್ತುಗಳನ್ನು ತಯಾರಿಸುವ ಕೆಲಸ ಮಾಡುತ್ತಾರೆ. ಪ್ರತಿವಾದಿ ಸಂಸ್ಥೆಯವರು ನಮ್ಮ ಸಂಸ್ಥೆಯಿಂದ ಚಾಕೊಲೆಟ್ ರಾಪರ್ ಮತ್ತು ಪೌಚುಗಳನ್ನು ಖರೀದಿ ಮಾಡಿರುತ್ತಾರೆ. ಪ್ರತಿವಾದಿ ಸಂಸ್ಥೆಯವರು 2018 ರಿಂದ 2021 ರವರೆಗೆ ನಮ್ಮ ಕಂಪನಿ ಜೊತೆ ವ್ಯವಹಾರ ಮಾಡಿರುತ್ತಾರೆ. ಅವರು 1.24 ಕೋಟಿಯ ವ್ಯವಹಾರ ಮಾಡಿರುತ್ತಾರೆ. ಆ ಪೈಕಿ 1.08 ಕೋಟಿಯನ್ನು ಪಾವತಿಸಿರುತ್ತಾರೆ. ಪ್ರತಿವಾದಿ ವ್ಯವಹಾರದ ಬಗ್ಗೆ ನಿಪಿ3 ಅಕೌಂಟ್ ಸ್ಟೇಟಮೆಂಟನ್ನು ಹಾಜರುಪಡಿಸಿದೆ. ನಿಪಿ3 ರಲ್ಲಿ 2018 ರ ವ್ಯವಹಾರದ ಬಗ್ಗೆ ನಮೂದಿಲ್ಲ ಎಂದರೆ ನಿಜ. ನಿಪಿ3 ನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ಸಂಸ್ಥೆಯವರು ಈ-ಮೇಲ್ ಮೂಲಕ ಪರ್ಚೆಸ್ ಆರ್ಡರನ್ನು ನೀಡುತ್ತಿದ್ದರು. ಅದರ ಪ್ರಕಾರ ನಾವು ಅವರಿಗೆ ಸರಕನ್ನು ಸರಬರಾಜು ಮಾಡುತ್ತಿದ್ದೆವು. ನಾವು ತಯಾರಿಸುವ ವಸ್ತುಗಳ ಕಚ್ಚಾ ವಸ್ತುವಿನ ಖರ್ಚನ್ನು ನಾವೇ ಭರಿಸುತ್ತೇವೆ ಎಂದರೆ ನಿಜ. ಪ್ಯಾಕಿಂಗ್ ಕವರನ್ನು ತಯಾರಿಸಲು ಪ್ರಿಟಿಂಗ್ ರೋಲರ್ಸ ಅಗತ್ಯವಿದೆ ಎಂದರೆ ನಿಜ. ಪ್ರಿಟಿಂಗ್ ರೋಲರ್ಸ ಹಣವನ್ನು ಪ್ರತಿವಾದಿ ಸಂಸ್ಥೆಯವರೇ

ಪಾವತಿ ಮಾಡುತ್ತಿದ್ದರು ಎಂದರೆ ನಿಜ. ನಾವು ಶ್ರೀಶಕ್ತಿ ಗ್ರೇವರ್ಸ ಸಂಸ್ಥೆಯಿಂದ ಖರೀದಿ ಮಾಡಿದ್ದ ಪ್ರಿಟಿಂಗ್ ರೋಲರ್ಸ ಹಣವನ್ನು ಪ್ರತಿವಾದಿ ಪಾವತಿ ಮಾಡಿದ್ದಾರೆ ಎಂದರೆ ಈಗ ನನಗೆ ಗೊತ್ತಿಲ್ಲ. ದಿನಾಂಕ 20.11.2017 ರ ಪ್ರಿಟಿಂಗ್ ರೋಲರ್ಸನ 3,06,471/– ರೂ.ಗಳನ್ನು ಪ್ರತಿವಾದಿ ಪಾವತಿ ಮಾಡಿದ್ದಾರೆ ಎಂದರೆ ಈಗ ನನಗೆ ಆ ಬಗ್ಗೆ ಗೊತ್ತಿಲ್ಲ. ದಿನಾಂಕ 9.4.2018 ರಂದು ಪ್ರತಿವಾದಿ ಸಂಸ್ಥೆಯವರು ಪ್ರಿಟಿಂಗ್ ರೋಲರ್ಸನ 52,732/– ರೂ.ಗಳನ್ನು ಪ್ರತಿವಾದಿ ಪಾವತಿ ಮಾಡಿದ್ದಾರೆ ಎಂದರೆ ಈಗ ನನಗೆ ಆ ಬಗ್ಗೆ ಗೊತ್ತಿಲ್ಲ. ಪ್ರಿಟಿಂಗ್ ರೋಲರ್ಸನ ಹಣವನ್ನು ಪ್ರತಿವಾದಿ ಪಾವತಿ ಮಾಡಿದ ಬಗ್ಗೆ ದಾವೆಯಲ್ಲಿ ಹೇಳಿಲ್ಲ ಎಂದರೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ4 ಮತ್ತು 5 ರಲ್ಲಿನ ಸರಕನ್ನು ಪ್ರತಿವಾದಿಗೆ ಸರಬರಾಜು ಮಾಡಿದ್ದೇವೆ. ನಾವು ಪ್ರಿಟಿಂಗ್ ರೋಲರ್ಸನ ಹಣವನ್ನು ಪ್ರತಿವಾದಿಗೆ ಪಾವತಿ ಮಾಡಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಪ್ರಿಟಿಂಗ್ ರೋಲರ್ಸನ ಹಣವನ್ನು ಪಾವತಿಸುವ ಅವಶ್ಯಕತೆ ಇಲ್ಲ, ಅವರು ಸಿಲಿಂಡರನ್ನು ವಾಪಸ್ ಪಡೆಯುತ್ತಾರೆ. ಈ ಪ್ರಕರಣದಲ್ಲಿ ಸಿಲಿಂಡರನ್ನು ವಾಪಸ್ ಕೊಡದಿರುವ ಕಾರಣ ಪ್ರತಿವಾದಿ ಬಾಕಿ ಹಣ ಪಾವತಿಸಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಅವರು ಹಣ ಪಾವತಿ ಮಾಡಿದ ನಂತರ ಸಿಲಿಂಡರನ್ನು ವಾಪಸ್ ಮಾಡುತ್ತೇವೆ. ಆ ಬಗ್ಗೆ ಚರ್ಚೆ ಮಾಡಿದ ಬಳಿಕ ಅವರು ಒಪ್ಪದಿದ್ದಾಗ ಈ ದಾವೆ ಹಾಕಿರುತ್ತೇವೆ. ಆ ಬಗ್ಗೆ ಪ್ರತಿವಾದಿಗೆ ಲಿಖಿತವಾಗಿ

ತಿಳಿಸಿರಬಹುದು ನನಗೆ ಗೊತ್ತಿಲ್ಲ. ಪ್ರಿಟಿಂಗ್ ರೋಲರ್ಸ್‌ನ ಹಣವನ್ನು ಕಳೆದು ನಾವೇ ಪ್ರತಿವಾದಿಗೆ 52 ಸಾವಿರ ಹಣ ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ. ಈಗಲೂ ನಾವು ಸಿಲಿಂಡರನ್ನು ವಾಪಸ್ ಮಾಡಿದಲ್ಲಿ ಪ್ರತಿವಾದಿ ಹಣ ಪಾವತಿಸಲು ತಯಾರಿದ್ದಾರೆ ಎಂದರೆ ಬಹಳ ತಡವಾಗಿದ್ದರಿಂದ ಈಗ ಆ ಸಿಲಿಂಡರ್ ಉಪಯೋಗಿಸಲು ಬರುವುದಿಲ್ಲ. ಸಿಲಿಂಡರನ್ನು ಸರಿಯಾದ ಸಮಯಕ್ಕೆ ವಾಪಸ್ ಮಾಡದ್ದರಿಂದ ಅದರ ಮೌಲ್ಯವನ್ನು ನಮಗೆ ಬರಬೇಕಾದ ಹಣಕ್ಕೆ ಸರಿದೂಗಿಸಿದ್ದಾರೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವಂತೆ ಪ್ರತಿವಾದಿ ನಮಗೆ ಹಣ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ಹಣ ಪಾವತಿಸಲು ತಡವಾಗಿದ್ದಕ್ಕೆ ಬಡ್ಡಿ ಕೇಳುತ್ತಿದ್ದೇವೆ. ಬಡ್ಡಿ ಕುರಿತು ಯಾವುದೇ ಅಗ್ರಿಮೆಂಟ್ ಆಗಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು